# ಸ್ವಾಮಿ ವಿವೇಕಾನಂದರ ಸ್ವಾತಂತ್ರ್ಯ ಮೀಮಾಂಸೆ *

ಡಾ. ಎಚ್.ಎನ್. ಮುರಳೀಧರ

ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಹೋರಾಡಿದ ಅನೇಕ ಮಂದಿ ಹೋರಾಟಗಾರರಿಗೆ ದೇಶಪ್ರೇಮ, ಸ್ಫೂರ್ತಿ, ಹಾಗೂ ಆದರ್ಶದ ಜ್ವಾಲೆಯನ್ನು ನೇರವಾಗಿಯೂ, ಪರೋಕ್ಷವಾಗಿಯೂ ಹೊತ್ತಿಸಿದವರು ಸ್ವಾಮೀಜಿ. ಈ ಕುರಿತು ವಿವೇಚಿಸಿರುವ ಲೇಖಕರು ನಿವೃತ್ತ ಕನ್ನಡ ಪ್ರಾಧ್ಯಪಕರು. ಉತ್ತಮ ವಾಗ್ಮಿಗಳು ಹಾಗೂ ಲೇಖಕರಾಗಿರುವ ಅವರು ದಿವ್ಯ ತ್ರಯರ ಬಗ್ಗೆ ಆಳವಾಗಿ ಅಧ್ಯಯನ ಮಾಡಿದ್ದಾರೆ ಹಾಗೂ ಹಲವು ಕನ್ನಡ ಕೃತಿಗಳನ್ನು ರಚಿಸಿದ್ದಾರೆ. ಅವರು ಬೆಂಗಳೂರು ರಾಮಕೃಷ್ಣ ಮಠದ ಭಕ್ತರು.



ಸ್ವಾಮಿ ವಿವೇಕಾನಂದರ ವಿಚಾರ ಮಂಡನೆಯ ಒಂದು ಮುಖ್ಯ ಲಕ್ಷಣವೆಂದರೆ ಅಲ್ಲಿ ಯಾವ ಒಂದು ಸಂಗತಿಯೂ ಬಿಡಿಯಾಗಿ ನಿಲ್ಲುವುದಿಲ್ಲ. ಧರ್ಮ, ಅಧ್ಯಾತ್ಮ, ಶಿಕ್ಷಣ, ಸಮಾಜ, ಮಾನವತೆ ಹೀಗೆ ಯಾವ ಒಂದರ ಬಗೆಗೆ ಅವರು ಮಾತನಾಡಿದರೂ ಅದು ಅಂತಿಮವಾಗಿ ಅಸ್ತಿತ್ವದ ಅಖಂಡತೆಯೊಂದಿಗೆ ಹೆಣೆದುಕೊಳ್ಳುತ್ತದೆ. ಅದಕ್ಕೊಂದು ಅಸ್ತಿತ್ವಾತ್ಮಕವಾದ (Existential) ಆಯಾಮ ಒದಗಿಬರುತ್ತದೆ. ಇದರಿಂದಾಗಿ ಈ ಮೂಲಕವೇ ಅವರ ಪ್ರತಿಪಾದನೆಗೆ ಒಂದು ಸಾರ್ವತ್ರಿಕತೆಯೂ ಸಿದ್ಧವಾಗುತ್ತದೆ. ಸ್ವಾತಂತ್ರ್ಯವನ್ನು ಕುರಿತ ಅವರ ಚಿಂತನೆಗಳ ಸಂದರ್ಭದಲ್ಲಿಯೂ ಇದನ್ನು ಕಾಣಬಹುದಾಗಿದೆ.

ಸ್ವಾಮಿ ವಿವೇಕಾನಂದರು ಜೀವತತ್ತ್ವವನ್ನು ಅರ್ಥಾತ್ ಅಸ್ತಿತ್ವವನ್ನು ವ್ಯಾಖ್ಯಾನಿಸಿದ್ದೇ ಬಿಡುಗಡೆಯ ಪರಿಭಾಷೆಯಲ್ಲಿ. 'ಬದುಕೆನ್ನುವುದು ತನ್ನನ್ನು ಕೆಳಕ್ಕೊತ್ತುತ್ತಿರುವ ಸನ್ನಿವೇಶಗಳಲ್ಲಿ ಜೀವಿಯೊಂದರ ವಿಕಸನ ಮತ್ತು ಬೆಳವಣಿಗೆ' *(೧.೨೮೧)* ಎಂಬ ಅವರ ಮಾತಿನಲ್ಲಿ ಇದನ್ನು ಗುರುತಿಸಬಹುದು. ಅವರ ಪ್ರಕಾರ ಜೀವತತ್ತ್ವದ ಅಸ್ತಿತ್ವವಿರುವುದೇ ಈ ಬಗೆಯ ಹೋರಾಟದಲ್ಲಿ. 'ಹೋರಾಟದಲ್ಲಿಯೇ ಜೀವತತ್ತ್ವದ ಕುರುಹಿರುವುದು' ಎನ್ನುವುದು ಅವರ ಇನ್ನೊಂದು ಮಾತು *(೭.೨೯೯)*. 'ಸಸ್ಯಗಳಲ್ಲಿ ಕೂಡ ಸ್ವಾತಂತ್ರ್ಯದ ಕಲ್ಪನೆಯಿಲ್ಲದೆ ಜೀವತತ್ತ್ವವೆಂಬುದಿರಲು ಸಾಧ್ಯವಿಲ್ಲ' *(೧.೩೩೬)* ಎಂಬ ಅವರ ಮಾತಿನಲ್ಲಿ ಈ ಅಭಿಪ್ರಾಯದ ವಿಸ್ತರಣೆಯನ್ನು ಕಾಣಬಹುದು. ಈ ದೃಷ್ಟಿಯಿಂದ ನೋಡಿದಾಗ ಒಂದು ನೆಲೆಯಲ್ಲಿ ಯಾವುದು ಬದುಕು ಅಥವಾ ಅಸ್ತಿತ್ವವೋ ಅದೇ ಇನ್ನೊಂದು ನೆಲೆಯಲ್ಲಿ ಹೋರಾಟದ ಮೂಲಕವೇ ತನ್ನನ್ನು ತಾನು ವಾಸ್ತವವಾಗಿಸಿಕೊಳ್ಳುತ್ತಿದೆ ಮತ್ತು ಈ ಹೋರಾಟದಲ್ಲಿಯೇ ಸ್ವಾತಂತ್ರ್ಯವೆನ್ನುವುದೂ ಅಂತರ್ಗತವಾಗಿದೆ. ಈ ಹಿನ್ನೆಲೆಯಲ್ಲಿ ಸ್ವಾತಂತ್ರ್ಯವೆನ್ನುವುದು ಯಾವುದು ಜೀವತತ್ತ್ವವಾಗಿ ಪ್ರಕಟಗೊಳ್ಳುತ್ತಿದೆಯೋ ಅದರೊಂದಿಗೆ ಸಮೀಕರಣಗೊಂಡಂತಾಯಿತು.

ಆದರೆ ಈ ಸಮೀಕರಣವು ಇಲ್ಲಿಗೇ ನಿಲ್ಲದೆ ಮುಂದುವರಿದ ನೆಲೆಯಲ್ಲಿ ಸ್ವಯಂ ದೈವಿಕತೆಯೊಂದಿಗೇ ಸಮೀಕರಣಗೊಳ್ಳುತ್ತದೆ. ಎಲ್ಲೆಲ್ಲಿ ಈ ಜೀವತತ್ತ್ವವಿದೆಯೋ ಅಲ್ಲೆಲ್ಲ ಈ ಸ್ವಾತಂತ್ರ್ಯದ ಹುಡುಕಾಟವಿದೆ ಮತ್ತು ಆ ಸ್ವಾತಂತ್ರ್ಯವೂ ದೇವರೆನ್ನುವುದೂ ಒಂದೇ ಆಗಿದೆ ಎನ್ನುವುದು ಅವರ ಅಭಿಮತ. ಇಲ್ಲಿ ಒಂದೆಡೆ ಜೀವತತ್ತ್ವದೊಂದಿಗೆ ಸ್ವಾತಂತ್ರ್ಯದ ಸಮೀಕರಣವಿದ್ದರೆ ಇನ್ನೊಂದೆಡೆ ದೈವಿಕತೆಯೊಂದಿಗೆ ಸ್ವಾತಂತ್ರ್ಯದ ಸಮೀಕರಣವಿದೆ. ಈ ದೃಷ್ಟಿಯಿಂದ ನೋಡಿದಾಗ ಅಸ್ತಿತ್ವವೇ ಸ್ವಾತಂತ್ರ್ಯವಾಗಿದೆ. ಅರ್ಥಾತ್ ಅಸ್ತಿತ್ವವು ತಾನು ತಾನಾಗಿರುವುದೇ ಸ್ವಾತಂತ್ರ್ಯದಿಂದ ಎಂದೂ ಹೇಳಬಹುದಾಗಿದೆ. ' ''ಬಿಡುಗಡೆ, ಆಹಾ ಬಿಡುಗಡೆ! ಬಿಡುಗಡೆ, ಆಹಾ ಬಿಡುಗಡೆ!'' ಎನ್ನುವುದು ಜೀವದ ಗಾನವೇ ಆಗಿದೆ' ಎನ್ನುವಲ್ಲಿ *(೧.೩೩೫)* ಈ ತಾತ್ತ್ವಿಕತೆಯ ಕಾವ್ಯಾತ್ಮಕ ಉದ್ಗಾರವನ್ನು ಕಾಣಬಹುದು. ಇಷ್ಟಲ್ಲದೆ ಇದರ ಮುಂದುವರಿಕೆಯಾಗಿ ವಿಶ್ವದ ಎಲ್ಲ ಚಲನೆಯೂ ಸ್ವಾತಂತ್ರ್ಯಕ್ಕಾಗಿಯೇ ಆಗಿದೆ ಎಂದು ಸ್ವಾಮಿ ವಿವೇಕಾನಂದರು ಅರ್ಥೈಸುತ್ತಾರೆ. 'ಸಮಸ್ತ ಪ್ರಕೃತಿಯೇ ತನ್ನೆಲ್ಲ ಅಣುಅಣುಗಳ ಮೂಲಕ ಮೊರೆಯುತ್ತಿರುವುದು ಆ ಒಂದಕ್ಕಾಗಿ — ತನ್ನ ಪರಿಪೂರ್ಣ ಸ್ವಾತಂತ್ರ್ಯಕ್ಕಾಗಿ.' *(೪.೨೪೧)*

ಸ್ವಾತಂತ್ರ್ಯವೆಂದರೆ ಹೋರಾಟ, ಹೋರಾಟವೆಂದರೆ ಚಲನೆ ಎಂದಾದ ಮೇಲೆ ಚಲನೆಯ ಚಡಪಡಿಕೆಯ ಹಿಂದೆ ಶಕ್ತಿಯೊಂದು ಕೆಲಸ ಮಾಡಬೇಕಷ್ಟೆ? ಈ ಚಲನೆಗೆ ಬೇಕಾದ ಶಕ್ತಿ ಬಂದುದೆಲ್ಲಿಂದ ಎನ್ನುವುದಕ್ಕೆ ಸ್ವಾಮಿ ವಿವೇಕಾನಂದರ ಉತ್ತರ ವಿಶಿಷ್ಟವಾದುದಾಗಿದೆ. ಇಲ್ಲೊಂದು ಅಸ್ತಿತ್ವದ ಗ್ರಹಿಕೆಯಿದೆ.

* ಬೆಂಗಳೂರು ಬಸವನಗುಡಿಯ ರಾಮಕೃಷ್ಣ ಮಠವು ಮೇ ೧೩ ಮತ್ತು ೧೪ನೆಯ ದಿನಾಂಕಗಳಂದು ಏರ್ಪಡಿಸಿದ್ದ 'ಸ್ವಾಮಿ ವಿವೇಕಾನಂದರು ಮತ್ತು ಭಾರತದ ಸ್ವಾತಂತ್ರ್ಯ ಆಂದೋಲನ' ಎಂಬ ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ೧೩ನೆಯ ದಿನಾಂಕದಂದು ಮಂಡಿಸಿದ ಪ್ರಬಂಧ.

ಅದು ಮನುಷ್ಯನನ್ನು ಕುರಿತ ಗ್ರಹಿಕೆಯೂ ಆಗಿದೆ. 'ಮಾನವನೆಂಬುವನು ಸಣ್ಣ ಪೆಟ್ಟಿಗೆಯೊಂದರಲ್ಲಿ ಅದುಮಲ್ಪಟ್ಟಿರುವ ಅನಂತವಾದೊಂದು ಸುರುಳಿಯಿದ್ದಂತೆ; ಆ ಸುರುಳಿಯೇ ಮರಳಿ ಬಿಚ್ಚಿಕೊಳ್ಳಲು ಯತ್ನಿಸುತ್ತಿದೆ. ನಾವು ಕಾಣುವ ಎಲ್ಲ ಸಾಮಾಜಿಕ ಘಟನಾವಳಿಗಳೂ ಹೀಗೆ ಬಿಚ್ಚಿಕೊಳ್ಳುತ್ತಿರುವುದರ ಪರಿಣಾಮವಾಗಿದೆ.' *(೧.೩೮೯)*

ಮಾನವನನ್ನು ಕುರಿತ ಈ ವಿವರಣೆಯಲ್ಲಿ ಮುಖ್ಯವಾದ ಒಂದು ಪಲ್ಲಟವಿದೆ. ಇಲ್ಲಿ ಸಾಮಾಜಿಕ ವಿದ್ಯಮಾನಗಳ ಬಹಿರಂಗದ ಕಡೆಯಿಂದ ಮನುಷ್ಯನನ್ನು ನೋಡದೆ ಮನುಷ್ಯನ ಅಂತರಂಗದ ಕಡೆಯಿಂದ ಸಾಮಾಜಿಕ ವಿದ್ಯಮಾನಗಳನ್ನು ನೋಡಲಾಗುತ್ತಿದೆ. ಮಾನವನ, ಧರ್ಮದ, ನಾಗರಿಕತೆಯ ಮತ್ತು ಪ್ರಗತಿಯ ಇತಿಹಾಸವೆಲ್ಲವೂ 'ಸುರುಳಿ ಬಿಚ್ಚಿಕೊಳ್ಳುತ್ತಿರುವುದರ' ಪರಿಣಾಮವಾದ್ದರಿಂದ ಎಲ್ಲ ಪ್ರಗತಿಯನ್ನು ಮನುಷ್ಯನ ಒಳಗಿನಿಂದ ನೋಡಬೇಕೆಂದು ಸ್ವಾಮಿ ವಿವೇಕಾನಂದರು ಅಭಿಪ್ರಾಯಪಡುತ್ತಾರೆ. ಇದು ಒಂದು ಕಡೆಯಿಂದ ವಿಕಾಸದ ವಿವರಣೆಯಾದರೆ ಇನ್ನೊಂದು ಕಡೆಯಿಂದ ಮನುಷ್ಯನ ವಿವರಣೆಯೂ ಆಗಿದೆ. ಲೋಕಸಾಮಾನ್ಯವಾದ ಗ್ರಹಿಕೆಯಲ್ಲಿ ವಿಶ್ವದ ಎಲ್ಲ ಆಗುಹೋಗುಗಳ ಪರಿಣಾಮದ ಬಿಂದುವಿನಲ್ಲಿ ಮನುಷ್ಯನನ್ನು ಇರಿಸಲಾಗುತ್ತದೆ. ಆದರೆ ಸ್ವಾಮಿ ವಿವೇಕಾನಂದರು ಎಲ್ಲ ಪರಿಣಾಮಗಳನ್ನು ಉಂಟು ಮಾಡುವ ಕರ್ತೃತ್ವದ ಬಿಂದುವಿನಲ್ಲಿ ಮನುಷ್ಯನನ್ನು ಇರಿಸುತ್ತಾರೆ. ಇಲ್ಲಿ ಮನುಷ್ಯನು ಪರಿಣಾಮದ ಫಲ ಅಲ್ಲ, ಪರಿಣಾಮದ ಕಾರಣ.

ಸ್ವಾಮಿ ವಿವೇಕಾನಂದರ ವಿಕಾಸದ ಈ ವಿವರಣೆ ಕೆಲವು ಮುಖ್ಯ ಸಂಗತಿಗಳನ್ನು ನಮ್ಮ ಮುಂದಿಡುತ್ತದೆ. ಮೊದಲನೆಯದಾಗಿ ಅವರ ಪ್ರಕಾರ ವಿಕಾಸವೆನ್ನುವುದು ಆಗದೆ ಇರುವುದರ ಆಗುವಿಕೆ ಅಲ್ಲ. ಅದು ಈಗಾಗಲೇ ಆಗಿರುವುದರ ಬಿಚ್ಚಿಕೊಳ್ಳುವಿಕೆ (Un-foldment) ಅರ್ಥಾತ್ ತನ್ನ ಮೊದಲಿನ ಸ್ಥಿತಿಗೆ ಮರಳುವಿಕೆ. ಹೀಗಾಗಿ ಎಲ್ಲ ವಿಕಸನದ (evolution) ಹಿಂದೆ ಒಂದು ಆಕುಂಚನ (Involution) ಇದೆ. ಈ ಆಕುಂಚನವೇ ವಿಕಸನದ ಚಲನೆಗೆ ಅಗತ್ಯವಾದ ಬಲವನ್ನು ನಿರ್ಮಾಣ ಮಾಡುತ್ತದೆ. ಈ ದೃಷ್ಟಿಯಿಂದ ನೋಡಿದಾಗ ಒಂದು ಕಡೆಯಿಂದ ಯಾವುದು ವಿಕಾಸವಾಗಿದೆಯೋ ಅದೇ ಇನ್ನೊಂದು ಕಡೆಯಿಂದ ಸ್ವಾತಂತ್ರ್ಯದೆಡೆಗಿನ ಚಲನೆಯೂ ಆಗಿದೆ. ಎರಡನೆಯದಾಗಿ ಇದು ಭೌತಿಕ ಸ್ತರದಲ್ಲಿನ ಬಹಿರಂಗದ ವಿಕಾಸ ಮಾತ್ರವಾಗಿರದೆ ಅಂತರಂಗದ ಸ್ತರದಲ್ಲಿನ ಪ್ರಜ್ಞೆಯ ವಿಕಾಸವೂ ಆಗಿದೆ. ಪ್ರಾಣಿಮಾನವನ (animal man) ಹಂತದಿಂದ ಬುದ್ಧಿಮಾನವನ (rational man) ಹಂತಕ್ಕೆ, ಅಲ್ಲಿಂದ ಇನ್ನೂ ಮುಂದಕ್ಕೆ ಬುದ್ಧಮಾನವನ (inspired man) ಹಂತಕ್ಕೆ ಈ ವಿಕಾಸದ ಸರಣಿಯಿದೆ. ಹೀಗಾಗಿ ಬುದ್ಧಸ್ಥಿತಿಯೆನ್ನುವುದು ವಿಕಸನಗೊಂಡ ಅಮೀಬಾ ಆದರೆ, ಅಮೀಬಾ ಎನ್ನುವುದು ಆಕುಂಚನಗೊಂಡ ಬುದ್ಧಸ್ಥಿತಿಯೂ ಆಗಿದೆ. ಆಕುಂಚನದಲ್ಲಿ ಬದ್ಧತೆಯಿದ್ದರೆ ವಿಕಾಸದಲ್ಲಿ ಮುಕ್ತತೆಯಿದೆ. ಇದರಿಂದಾಗಿ ಇಲ್ಲಿ ಪ್ರಗತಿ ಮತ್ತು ಸ್ವಾತಂತ್ರ್ಯಗಳೆರಡೂ ಒಂದರೊಡನೊಂದು ಹೆಣೆದುಕೊಂಡುಬರುತ್ತವೆ; ಅಷ್ಟೇಕೆ, ಒಂದೇ ಆಗಿಬಿಡುತ್ತವೆ. ಆದ್ದರಿಂದಲೇ ವಿವೇಕಾನಂದರು ವಿಶ್ವದ ಎಲ್ಲ ಚಲನೆಯನ್ನು ಸ್ವಾತಂತ್ರ್ಯದೊಂದಿಗೆ ಸಮೀಕರಿಸುತ್ತಾರೆ. ಇದು ವ್ಯಷ್ಟಿಯ ಹಂತದಲ್ಲಿಯೂ ನಿಜ; ಸಮಷ್ಟಿಯ ಹಂತದಲ್ಲಿಯೂ ನಿಜ. ಯಾವ ನಿಯಮ ವ್ಯಕ್ತಿಯ ಹಂತದಲ್ಲಿ ಕೆಲಸ ಮಾಡುತ್ತದೆಯೋ ಅದೇ ನಿಯಮವೇ ಸಮಾಜದ ಹಂತದಲ್ಲಿಯೂ ಕೆಲಸ ಮಾಡುತ್ತದೆ. ಇನ್ನೊಂದು ರೀತಿಯಲ್ಲಿ ಹೇಳುವುದಾದರೆ, ವ್ಯಕ್ತಿಯ ಬೆಳವಣಿಗೆಯೇ ತನಗೆ ಸಮಾನಾಂತರವಾಗಿ ಸಾಮಾಜಿಕ ಬೆಳವಣಿಗೆಯನ್ನು ಆಗುಮಾಡಿಸುವಂಥದೂ ಆಗಿದೆ. ಇದನ್ನು ಸ್ವಾಮಿ ವಿವೇಕಾನಂದರು ಇನ್ನಿಲ್ಲದಂತೆ ಮತ್ತೆ ಮತ್ತೆ ಸ್ಪಷ್ಟಪಡಿಸುತ್ತಾರೆ:

'..... ಪ್ರತಿಯೊಂದು ಚಲನೆಯ ಮೂಲಕವೂ ಮಾನವನು ತನ್ನ ಸ್ವಾತಂತ್ರ್ಯವನ್ನು ದೃಢಪಡಿಸುತ್ತಾನೆ.' *(೪.೩೮೨)*

'ಬದುಕಿನ ಎಲ್ಲ ಪ್ರಯತ್ನ ಮತ್ತು ಹೋರಾಟ ಸ್ವಾತಂತ್ರ್ಯಕ್ಕಾಗಿ. ಅದು ಜನಾಂಗಗಳ, ಜಗತ್ತುಗಳ ಮತ್ತು ವ್ಯವಸ್ಥೆಗಳ ವಿಶ್ವಾತ್ಮಕವಾದ ಮಹಾಮುನ್ನಡೆ.' *(೮.೨೩೮)*

'ಸಮಾಜದ ಸಮಗ್ರ ಜೀವನವೇ ಈ ಒಂದು ಸ್ವಾತಂತ್ರ್ಯತತ್ತ್ವದ ದೃಢ ಪ್ರತಿಪಾದನೆಯಾಗಿದೆ.' *(೨.೧೨೬)*

ಸ್ವಾಮಿ ವಿವೇಕಾನಂದರ ಈ ಎಲ್ಲ ಮಂಡನೆಗಳ ಸಾರಾಂಶ ಒಂದೇ ಆಗಿದೆ. ಅದೆಂದರೆ, ಸ್ವಾತಂತ್ರ್ಯದ ಸಿದ್ಧಿಯಿರುವುದು ಸೀಮಿತ ಅಹಮಿಕೆಯಿಂದ ಅಹಮಿಕೆಯ ನಿರಾಕರಣೆಯ ಕಡೆಗೆ ಚಲಿಸುವುದರಲ್ಲಿ; ಅರ್ಥಾತ್ ದೇಹಾತ್ಮನು ವಿಶ್ವಾತ್ಮನಾಗುವುದರಲ್ಲಿ. ಅವರಿಗೆ ಪ್ರಿಯವಾದ ಮಾತುಗಳಲ್ಲೇ ಹೇಳುವುದಾದರೆ 'ತೋರಿಕೆಯ ಮಾನವ'ನು 'ನೈಜ ಮಾನವ'ನಾಗುವುದರಲ್ಲಿ.

'ಜೀವವು ತನ್ನ ಬಂಧನದ ಬಗೆಗೆ ಎಚ್ಚೆತ್ತುಕೊಳ್ಳುವುದು ಮತ್ತು ಎದ್ದುನಿಂತು ತನ್ನ ನಿಜಸ್ವರೂಪವನ್ನು ದೃಢಪಡಿಸಿಕೊಳ್ಳುವುದು — ಇದನ್ನೇ ಜೀವನವೆಂದು ಕರೆಯುವುದು. ಈ ಹೋರಾಟದಲ್ಲಿ ಪಡೆಯುವ ಯಶಸ್ಸನ್ನೇ ವಿಕಾಸವೆನ್ನುವುದು. ಎಲ್ಲ ದಾಸ್ಯವೂ ಕಳಚಿಕೊಂಡಾಗಿನ ಈ ಅಂತಿಮ ಜಯ – ಇದನ್ನೇ ಮುಕ್ತಿ, ನಿರ್ವಾಣ, ಬಿಡುಗಡೆ ಎನ್ನುವುದು. ವಿಶ್ವದ ಪ್ರತಿಯೊಂದೂ ಬಿಡುಗಡೆಗಾಗಿ ಚಡಪಡಿಸುತ್ತಿದೆ. ನಾನು ನನ್ನ ಸ್ವಭಾವದಿಂದ, ನಾಮರೂಪಗಳಿಂದ, ಕಾಲದೇಶಗಳಿಂದ, ಕಾರ್ಯಕಾರಣಗಳಿಂದ ಬದ್ಧನಾದಾಗ ನಾನು ನಿಜಕ್ಕೂ ಏನೆನ್ನುವುದು ನನಗೆ ತಿಳಿಯುವುದಿಲ್ಲ. ಆದರೆ ಈ ಬಂಧನದಲ್ಲಿಯೂ ನನ್ನ ನೈಜಾತ್ಮ ಸಂಪೂರ್ಣವಾಗಿ ಕಳೆದುಹೋಗುವುದಿಲ್ಲ. ನಾನು ಬಂಧನಗಳ ವಿರುದ್ಧ ಸೆಣಸುತ್ತೇನೆ; ಅವು ಒಂದಾದ ಮೇಲೊಂದರಂತೆ ತುಂಡಾಗುತ್ತವೆ; ಆಗ ನನಗೆ ನನ್ನ ಸ್ವಾತ್ಮವೈಭವದ ಅರಿವಾಗುತ್ತದೆ. ಆಗ ಬರುತ್ತದೆ, ಸಂಪೂರ್ಣ ಬಿಡುಗಡೆ. ಆಗ ನನಗೆ ಅತ್ಯಂತ ಸ್ಪಷ್ಟವಾಗಿ ಹಾಗೂ ಸಂಪೂರ್ಣವಾಗಿ ನನ್ನತನದ ಅರಿ

ವಾಗುತ್ತದೆ – ನಾನು ಅನಂತ ಚೈತನ್ಯ, ಪ್ರಕೃತಿಯ ಒಡೆಯ, ಅದರ ದಾಸನಲ್ಲ ಎಂಬ ಅರಿವಾಗುತ್ತದೆ. ಎಲ್ಲ ಭೇದಗಳು ಮತ್ತು ಸಂಯೋಜನೆಗಳ ಆಚೆಗೆ, ಕಾಲ–ದೇಶ–ಕಾರ್ಯ–ಕಾರಣಗಳಾಚೆಗೆ ಇರುವ ಆ ನಾನೇ ನಾನು'. *(೮.೨೪೯)*

ಅಲ್ಲದೆ ಇಲ್ಲಿ ಗಮನಿಸಬೇಕಾದ ಇನ್ನೊಂದು ಮುಖ್ಯ ಸಂಗತಿಯೆಂದರೆ ಈ ವಿಶ್ವಾತ್ಮಕತೆಯೆನ್ನುವುದು ಕೇವಲ ಒಂದು ಸಿದ್ಧಾಂತವಾಗಿ ನೆಲೆಗೊಳ್ಳುವುದಿಲ್ಲ. ಅನುಷ್ಠಾನದ ಸ್ತರದಲ್ಲಿ ಅದು ವಿಶ್ವದ ಪ್ರತಿಯೊಂದನ್ನೂ ತಾನೆಂದೇ, ತನ್ನದೆಂದೇ ತಬ್ಬಿಕೊಳ್ಳುತ್ತದೆ.

'ಪ್ರತಿಯೊಬ್ಬ ಮನುಷ್ಯನಿಗೂ ಬೋಧಿಸುವುದು ಇದನ್ನು: ನೀನು ವಿಶ್ವಾತ್ಮಕ ಅಸ್ತಿತ್ವದೊಂದಿಗೆ ಒಂದಾಗಿರುವೆ; ಹಾಗಾಗಿ ಅಸ್ತಿತ್ವದಲ್ಲಿರುವ ಎಲ್ಲ ಜೀವವೂ ನಿನ್ನ ಜೀವ; ಅಸ್ತಿತ್ವದಲ್ಲಿರುವ ಎಲ್ಲ ಶರೀರವೂ ನಿನ್ನ ಶರೀರ; ಯಾರನ್ನಾದರೂ ಹಿಂಸಿಸಿದರೆ ನಿನ್ನನ್ನು ನೀನೇ ಹಿಂಸಿಸಿಕೊಳ್ಳುತ್ತಿರುವೆ; ಯಾರನ್ನಾದರೂ ಪ್ರೀತಿಸಿದರೆ ನಿನ್ನನ್ನು ನೀನೇ ಪ್ರೀತಿಸಿಕೊಳ್ಳುತ್ತಿರುವೆ. ದ್ವೇಷದ ಹೊನಲನ್ನು ಹೊರಗೆ ಚಿಮ್ಮಿಸಿದಾಕ್ಷಣ, ಅದು ಯಾರನ್ನೇ ಹಿಂಸಿಸಿದರೂ, ನಿನ್ನನ್ನೂ ಹಿಂಸಿಸುತ್ತದೆ. ನಿನ್ನಿಂದ ಪ್ರೀತಿ ಹೊರಕ್ಕೆ ಬಂದಲ್ಲಿ ಅದು ಮರಳಿ ನಿನ್ನಲ್ಲಿಗೆ ಹಿಂದಿರುಗಲೇಬೇಕು. ಏಕೆಂದರೆ ನಾನೇ ವಿಶ್ವ ; ಈ ವಿಶ್ವವು ನನ್ನ ಶರೀರ. ನಾನು ಅನಂತ; ಇಷ್ಟೇ, ಈಗ ನನಗೆ ಅದರ ಅರಿವಿಲ್ಲ. ಆದರೆ ಈ ಅನಂತದ ಅರಿವನ್ನು ಪಡೆಯಲು ನಾನು ಹೆಣಗುತ್ತಿದ್ದೇನೆ. ಈ ಅನಂತದ ಸಂಪೂರ್ಣ ಅರಿವು ಬಂದಾಗ ಪರಿಪೂರ್ಣತೆ ಪ್ರಾಪ್ತವಾಗುತ್ತದೆ.' *(೧.೩೮೯–೯೦)*

ಇದು ವ್ಯಕ್ತಿಗತ ನೆಲೆಯಲ್ಲಿನ ವಿಕಾಸದ ಪರಾಕಾಷ್ಠೆಯಾದರೆ ಸಾಮಾಜಿಕ ವಿಕಾಸವೆನ್ನುವಂಥದೂ ಇದಕ್ಕೆ ಸಮಾನಾಂತರವಾಗಿಯೇ ಇದೆ. ಹಿಂದೆಯೇ ನೋಡಿದಂತೆ ಸಾಮಾಜಿಕ ವಿಕಾಸವನ್ನು ಆಗು ಮಾಡಿಸುತ್ತಿರುವುದಾದರೂ ಮೂಲಭೂತವಾಗಿ ವ್ಯಕ್ತಿಗತ ವಿಕಾಸವೇ ಆಗಿದೆ. ಹೀಗಾಗಿ ವ್ಯಕ್ತಿಯ ಗುಣಾತ್ಮಕ ಬೆಳವಣಿಗೆಯ ವಿಸ್ತರಣವೇ ಸಮಾಜದ ಗುಣಾತ್ಮಕ ಬೆಳವಣಿಗೆಯಾಗಿದೆ. ಸಮಾಜವೆನ್ನುವುದು ಕೇವಲ ವ್ಯಕ್ತಿಗಳ ಭೌತಿಕ ರಾಶಿ ಅಥವಾ ಮೊತ್ತವಲ್ಲ. ಅದಕ್ಕೊಂದು ಜೈವಿಕತೆಯಿದೆ. ವಿಕಾಸದ ಪಥದಲ್ಲಿ ಸಮಾಜವೂ ಸ್ಥೂಲದ ಸ್ತರದಿಂದ ಸೂಕ್ಷ್ಮದ ಸ್ತರದ ಕಡೆಗೆ ಚಲಿಸುತ್ತದೆ. 'ಯಾವ ಸಮಾಜದಲ್ಲಿ ಅತ್ಯುನ್ನತ ಸತ್ಯಗಳು ಅನುಷ್ಠಾನಸಾಧ್ಯವಾಗುತ್ತವೆಯೋ ಅದು ಆದರ್ಶ ಸಮಾಜ' *(೨.೮೫)* ಎನ್ನುವುದು ವಿವೇಕಾನಂದರ ಅಭಿಮತ. ಹೀಗಾಗಿ ವ್ಯಕ್ತಿಗತ ವಿಕಾಸದ ಸಂದರ್ಭದಲ್ಲಿ ನಿಜವಾಗುವ ಮೌಲ್ಯಗಳೇ ಸಾಮಾಜಿಕ ವಿಕಾಸದ ಸಂದರ್ಭದಲ್ಲಿಯೂ ನಿಜವಾಗಬೇಕಾಗುತ್ತದೆ. ಏಕೆಂದರೆ ವ್ಯಕ್ತಿಯ ಮುನ್ನಡೆಯನ್ನು ಚೋದಿಸುವ ಸಂಗತಿಗಳೇ ಸಮಾಜದ ಮುನ್ನಡೆಯನ್ನು ಚೋದಿಸುವ ಸಂಗತಿಗಳೂ ಆಗಿವೆ.

ಅಹಮಿಕೆಯ ವಿಸ್ತರಣೆ ವ್ಯಕ್ತಿಯ ವಿಕಸನದ ಸೂಚಕವಾಗಿರುವಂತೆ ಸಮಾಜದ ವಿಕಸನದ ಸೂಚಕವೂ ಆಗಿದೆ. ಪ್ರತಿಯೊಂದೂ ಎಲ್ಲದಕ್ಕಾಗಿ, ಎಲ್ಲವೂ ಪ್ರತಿಯೊಂದಕ್ಕಾಗಿ ಎನ್ನುವುದು ಇಲ್ಲಿನ ಅನುಷ್ಠಾನದ ಸೂತ್ರವಾಗುತ್ತದೆ. ಇಲ್ಲಿ ವ್ಯಷ್ಟಿಯು ಪಡೆಯುವುದು ಸಮಷ್ಟಿಯಿಂದ ತನ್ನನ್ನು ಪ್ರತ್ಯೇಕವಾಗಿಸಿಕೊಂಡು ಅಲ್ಲ. ವ್ಯಷ್ಟಿಯು ಸಮಷ್ಟಿಗೆ ಬಿಟ್ಟುಕೊಡುತ್ತದೆ; ಆ ಬಳಿಕ ಸಮಷ್ಟಿಯು ವ್ಯಷ್ಟಿಗೆ ವಿತರಿಸುತ್ತದೆ. ಇದು ಸಾಮಾಜಿಕ ಸ್ತರದಲ್ಲಿನ ಋತವಾಗಿ ಕೆಲಸ ಮಾಡುತ್ತದೆ. ಈ ದೃಷ್ಟಿಯಿಂದ ನೋಡಲೂ ಇಲ್ಲಿ ಸಮಾನತೆ–ಸ್ವಾತಂತ್ರ್ಯಗಳೆರಡೂ ಒಂದರೊಂದು ಹೆಣೆದುಕೊಂಡಿವೆ. ಹಾಗೆ ನೋಡಿದಾಗ ಸ್ವಾತಂತ್ರ್ಯದ ಕಾರ್ಯಾನುಷ್ಠಾನವಾಗುವುದೇ ಸಮಾನತೆಯ ಮೂಲಕ. ಸ್ವಾತಂತ್ರ್ಯವು ಆದರ್ಶವಾದರೆ (vision) ಸಮಾನತೆಯು ಅನುಷ್ಠಾನವಾಗಿದೆ (mission). ಆದ್ದರಿಂದಲೇ ಸ್ವಾಮಿ ವಿವೇಕಾನಂದರು ಹೇಳುತ್ತಾರೆ: 'ಸ್ವಾತಂತ್ರ್ಯಾಗಮನದ ಸೂಚನೆಯೆಂದರೆ ಹೆಚ್ಚು ಹೆಚ್ಚು ಸಾದೃಶ್ಯ ಮತ್ತು ಸಮಾನತೆ.' *(೧.೪೨೬)* ಅವರು ಸಮಾನತೆಯನ್ನು ಕೇವಲ ಒಂದು ವ್ಯಾವಹಾರಿಕ ಸಾಧ್ಯತೆಯಾಗಿ ನೋಡುವುದಿಲ್ಲ. ಅದಕ್ಕೆ ಅವರಲ್ಲಿ ಸಹಜವಾದ ಒಂದು ಅಸ್ತಿತ್ವಾತ್ಮಕ ನೆಲೆಯಿದೆ. ವಿಶ್ವದ ರಚನೆಯಲ್ಲಿ ಒಂದು ಮೇಲು, ಒಂದು ಕೀಳು, ಒಂದು ಹೆಚ್ಚು, ಒಂದು ಕಡಮೆ ಎಂದು ವಿಭಜಿಸುವುದೇ ಅನೈಸರ್ಗಿಕ ಎನ್ನುವುದು ಅವರ ಮತ. 'ಅಸ್ತಿತ್ವದ ಸಮಗ್ರತೆಗೆ ಒಂದು ಸಣ್ಣ ಕಣವೂ ಅಗತ್ಯವಾಗಿರುವ ಈ ಅದ್ಭುತ ಪರಸ್ಪರಾವಲಂಬನೆಯಲ್ಲಿ ಯಾವುದು ಮೇಲು ಮತ್ತು ಯಾವುದು ಕೀಳು?' *(೨.೩೯೯)* ಎಂಬ ಅವರ ಮಾತಿನಲ್ಲಿ ಇದರ ಸ್ಪಷ್ಟತೆಯಿದೆ. 'ಇದೊಂದು ಮಾನವ ಸ್ವಭಾವಕ್ಕಂಟಿದ ಮಹಾರೋಗ. ಮಾನವ ಜನಾಂಗದ ಮೇಲಿನ ಮಹಾಶಾಪ, ಎಲ್ಲ ಸಂಕಟಗಳ ಮೂಲ – ಈ ಅಸಮಾನತೆ. ಇದೇ ಎಲ್ಲ ಭೌತಿಕ, ಮಾನಸಿಕ ಮತ್ತು ಆಧ್ಯಾತ್ಮಿಕ ಬಂಧನದ ಮೂಲ' *(೪.೩೨೯)* ಎನ್ನುವಲ್ಲಿ ಈ ಕುರಿತ ಅವರ ನಿಲುವು ಇನ್ನಿಲ್ಲದಂತೆ ಖಚಿತವಾಗಿರುವುದನ್ನು ಕಾಣಬಹುದು. 'ಒಂದು ವೇಳೆ ನಿಸರ್ಗದಲ್ಲಿ ಅಸಮಾನತೆಯಿದೆ ಎನ್ನುವುದಾದರೂ ಆಗಲೂ ಎಲ್ಲರಿಗೂ ಸಮಾನ ಅವಕಾಶಗಳಿರಬೇಕು. ಕೆಲವರಿಗೆ ಹೆಚ್ಚು , ಕೆಲವರಿಗೆ ಕಡಿಮೆ ಎನ್ನುವುದಾದರೆ, ದುರ್ಬಲರಾದವರಿಗೆ ಶಕ್ತಿವಂತರಿಗಿಂತ ಹೆಚ್ಚು ಕೊಡುವಂತಾಗಬೇಕು' *(೬.೩೧೯)* ಎಂಬ ಮಾತಿನಲ್ಲಿ ಸಮಾನತೆಯ ಬಗೆಗಿನ ಅವರ ಅಗಾಧ ಕಳಕಳಿ ವ್ಯಕ್ತವಾಗುತ್ತದೆ. 'ಯಾವುದೇ ವ್ಯಕ್ತಿಯಾಗಲಿ ಅಥವಾ ಯಾವುದೇ ರಾಷ್ಟ್ರವಾಗಲಿ, ಭೌತಿಕ ಸಮಾನತೆಯಿಲ್ಲದೆ ಭೌತಿಕ ಸ್ವಾತಂತ್ರ್ಯವನ್ನು, ಮಾನಸಿಕ ಸಮಾನತೆಯಿಲ್ಲದೆ ಮಾನಸಿಕ ಸ್ವಾತಂತ್ರ್ಯವನ್ನು ಪಡೆಯಲೆತ್ನಿಸುವುದು ಸಾಧ್ಯವೇ ಇಲ್ಲ' *(೪.೩೨೮)* ಎಂಬ ಅವರ ಅಭಿಮತ ಎಲ್ಲ ಕಾಲದ ವಾಸ್ತವವಾಗಿದೆ.

ಸ್ವಾತಂತ್ರ್ಯವು ನೆಲೆಗೊಳ್ಳುವುದು ಸಮಾನತೆಯ ಮೂಲಕ ಎಂಬ ಈ ವಿಚಾರ ಇನ್ನೆರಡು ಸಂಗತಿಗಳ ಕಡೆಗೆ ನಮ್ಮನ್ನು ಕರೆದುಕೊಂಡು ಹೋಗುತ್ತದೆ. ಏಕೆಂದರೆ ಇವು ಸಮಾನತೆಯ ತಾರ್ಕಿಕವಾದ ಮುಂದುವರಿಕೆಯೇ ಆಗಿವೆ. ಸ್ವಾಮಿ ವಿವೇಕಾ

ನಂದರ ಪ್ರಕಾರ ಸಮಾನತೆಯನ್ನು ಮಾನ್ಯ ಮಾಡುವುದೆಂದರೆ ವೈವಿಧ್ಯವನ್ನು ಮಾನ್ಯ ಮಾಡುವುದೂ ಆಗಿದೆ ಮತ್ತು ವೈವಿಧ್ಯಕ್ಕೆ ನೀಡುವ ಮಾನ್ಯತೆ ಸಹಜವಾಗಿಯೇ ಸಹಿಷ್ಣುತೆಯ ಅಭ್ಯಾಸವನ್ನು ಅಪೇಕ್ಷಿಸುತ್ತದೆ. ಅಹಮಿಕೆಯ ನಿರಾಕರಣೆ ಎನ್ನುವುದು ವ್ಯಕ್ತಿವಿಕಾಸದಲ್ಲಿ ಹೇಗೋ ಹಾಗೆಯೇ ಸಾಮಾಜಿಕ ವಿಕಾಸದಲ್ಲಿಯೂ ಆಧಾರಭೂತವಾದ ಸಂಗತಿಯಾಗಿರುವುದರಿಂದ ಪ್ರತಿಯೊಂದನ್ನೂ ತನ್ನ ಸಹಜ ಸ್ವಭಾವಕ್ಕೆ ಅನುಗುಣವಾಗಿ ವಿಕಸನಗೊಳ್ಳಲು ಅನುವು ಮಾಡಿಕೊಡುವಲ್ಲಿಯೇ ಸ್ವಾತಂತ್ರ್ಯದ ವ್ಯಾವಹಾರಿಕ ಅನುಷ್ಠಾನವಿದೆ. ಪ್ರತಿಯೊಂದಕ್ಕೂ ತನ್ನದೇ ಆದ ಬೆಳವಣಿಗೆಯ 'ತಂತ್ರ' (ಸ್ವ-ತಂತ್ರ') ಇರುವುದರಿಂದ ಯಾವ ಒಂದೂ ಬೇರೊಂದರಂತೆ ಇರಬೇಕಿಲ್ಲ ಮತ್ತು ಬೇರೊಂದರಂತೆ ಆಗಬೇಕಿಲ್ಲ ಎಂಬ ವಿವೇಕ ಇದರ ಹಿಂದೆ ಕೆಲಸ ಮಾಡುತ್ತದೆ. ಎಲ್ಲದರ ಸ್ವಾತಂತ್ರ್ಯದೊಂದಿಗೆ ಹೆಣೆದುಕೊಂಡೇ ತನ್ನ ಸ್ವಾತಂತ್ರ್ಯವಿರುವುದರಿಂದ ವೈವಿಧ್ಯವನ್ನು ಗೌರವಿಸುವುದು ಈ ದೃಷ್ಟಿಯಿಂದ ಅತ್ಯಗತ್ಯವಾಗುತ್ತದೆ. ಇದನ್ನು ಸ್ವಾಮಿ ವಿವೇಕಾನಂದರು ಸಂದೇಹಕ್ಕೆಡೆಯಿಲ್ಲದಂತೆ ಸ್ಪಷ್ಟಪಡಿಸಿದ್ದಾರೆ:

'ವೈವಿಧ್ಯವು ಜೀವಂತಿಕೆಯ ಗುರುತು; ಅದು ಇದ್ದೇ ತೀರಬೇಕು'. *(೨.೩೬೪)*

'ಮನುಷ್ಯನನ್ನು ಮನುಷ್ಯನನ್ನಾಗಿ ಇಡಲು ವಿವಿಧತೆಯಲ್ಲಿ ಏಕತೆ ಅವಶ್ಯವಾಗಿದೆ.' *(೩.೩೫೯)*

'ಪ್ರತಿಯೊಂದರಲ್ಲಿಯೂ ವೈವಿಧ್ಯವನ್ನು ಸಂರಕ್ಷಿಸಬೇಕು. ಏಕೆಂದರೆ ಎಲ್ಲಿಯವರೆಗೆ ವೈವಿಧ್ಯವಿರುತ್ತದೆಯೋ ಅಲ್ಲಿಯವರೆಗೆ ಜಗತ್ತು ಅಸ್ತಿತ್ವದಲ್ಲಿರುತ್ತದೆ.' *(೩.೩೫೯)*

ಅಲ್ಲದೆ ಈ ಸಂದರ್ಭದಲ್ಲಿ ಸ್ವಾಮಿ ವಿವೇಕಾನಂದರು ಇನ್ನೊಂದು ಸಂಗತಿಯನ್ನೂ ಸ್ಪಷ್ಟಪಡಿಸುತ್ತಾರೆ. ಒಮ್ಮೆ ನಾವು ಅಸ್ತಿತ್ವದ ಅನಿವಾರ್ಯತೆಯಾಗಿ ವೈವಿಧ್ಯವನ್ನು ಒಪ್ಪಿಕೊಂಡೆವೆಂದರೆ ಆಗ ಯಾವುದನ್ನೂ 'ಹೊರತುಪಡಿಸಲು' (exclusion) ಸಾಧ್ಯವಾಗುವುದಿಲ್ಲ, ಏಕೆಂದರೆ ಎಲ್ಲ ಹಂತಗಳಲ್ಲಿಯೂ ಎಲ್ಲವನ್ನೂ ಎಲ್ಲರನ್ನೂ ಒಳಗು ಮಾಡಿಕೊಂಡಾಗಲೇ ಸ್ವಾತಂತ್ರ್ಯವೆನ್ನುವುದು ಆಧ್ಯಾತ್ಮಿಕವಾಗಿ ವಾಸ್ತವವಾಗಲು ಸಾಧ್ಯವಾಗುತ್ತದೆ. ಸ್ವಾಮಿ ವಿವೇಕಾನಂದರ ಮಾತುಗಳನ್ನೇ ನೋಡುವುದಾದರೆ –

'ನನಗೆ ಆತ್ಯಂತಿಕವಾಗಿ ಖಚಿತವಾಗಿರುವುದೇನೆಂದರೆ ಯಾವುದೇ ವ್ಯಕ್ತಿಯಾಗಲಿ ರಾಷ್ಟ್ರವಾಗಲಿ ತನ್ನನ್ನು ತಾನು ಇತರ ಸಮುದಾಯಗಳಿಂದ ಹೊರತುಪಡಿಸಿಕೊಂಡು ಬದುಕಲು ಸಾಧ್ಯವಿಲ್ಲ. ಯಾವ ಯಾವ ಸಂದರ್ಭಗಳಲ್ಲಿ ಶ್ರೇಷ್ಠತೆ, ಸಂಪ್ರದಾಯ ಅಥವಾ ಮಡಿವಂತಿಕೆಯ ಪೊಳ್ಳು ಭಾವನೆಗಳ ಹೆಸರಿನಲ್ಲಿ ಅಂತಹ ಪ್ರಯತ್ನವನ್ನು ಮಾಡಲಾಗಿದೆಯೋ, ಆಗ ಅದರ ಪರಿಣಾಮವಾಗಿ ಹೊರತುಪಡಿಸಿಕೊಂಡವರೇ ದುರ್ಗತಿಯನ್ನು ಹೊಂದಿದ್ದಾರೆ... ಚಲನೆಯೇ ಜೀವಂತಿಕೆಯ ಕುರುಹು.' *(೪.೩೬೫)*

ಸರ್ವಸ್ವೀಕಾರದಲ್ಲಿ ಮಾತ್ರವೇ ಸ್ವಾತಂತ್ರ್ಯದ ವ್ಯಾವಹಾರಿಕ ಸಾಧ್ಯತೆಯಿದ್ದು ವ್ಯಷ್ಟಿ ಹಾಗೂ ಸಮಷ್ಟಿ ಹೀಗೆ ಎರಡೂ ನೆಲೆಗಳಲ್ಲಿ ಇದು ಅನುಷ್ಠಾನಗೊಳ್ಳಬೇಕಾಗಿದೆ. ಇದು ವಿವೇಕಾನಂದ ವೇದಾಂತದ ಪರಾಕಾಷ್ಠೆಯೂ ಹೌದು. ಸಾಮಾನ್ಯವಾದ ಗ್ರಹಿಕೆಯ ನೆಲೆಗಳಲ್ಲಿ ಸಂಘರ್ಷಗಳಿಗೆ ಕಾರಣವಾಗಬಹುದಾದ ವಿಷಮತೆಗಳನ್ನು ಇದು ಮಾತ್ರವೇ ಸಹನಶೀಲತೆಯಲ್ಲಿ ಅರ್ಥಮಾಡಿಕೊಳ್ಳಲು ಅನುವಾಗಬಲ್ಲದು. ಆದರ್ಶವನ್ನು ವ್ಯವಹಾರದೊಂದಿಗೆ ರಾಜಿ ಮಾಡಿಕೊಳ್ಳುವುದಕ್ಕೆ ಬಿಡದೆ, ಆದರ್ಶವನ್ನು ಆದರ್ಶವಾಗಿಯೇ ಉಳಿಸಲು ಬಹುಶಃ ಇದಕ್ಕೆ ಮಾತ್ರ ಸಾಧ್ಯವಾದೀತೆಂದು ತೋರುತ್ತದೆ. ಈ ನಿಟ್ಟಿನಲ್ಲಿ ವಿವೇಕಾನಂದರ ನುಡಿಗಳ ಅವಲೋಕನ ಅತ್ಯಗತ್ಯವಾಗಿದೆ:

'ವೇದಾಂತದಲ್ಲಿರುವ ಒಂದು ವಿಶಿಷ್ಟವಾದ ಭಾವನೆಯೆಂದರೆ ಧಾರ್ಮಿಕ ಚಿಂತನೆಗಳಿಗೆ ಸಂಬಂಧಿಸಿದಂತೆ ಇರುವ ಈ ಅನಂತವಾದ ವೈವಿಧ್ಯಗಳಿಗೆ ಅನುವು ಮಾಡಿಕೊಡಬೇಕು, ಎಲ್ಲರನ್ನೂ ಒಂದೇ ಅಭಿಪ್ರಾಯಕ್ಕೆ ತರಲು ಪ್ರಯತ್ನಿಸಬಾರದು ಎನ್ನುವುದು. ಏಕೆಂದರೆ ಎಲ್ಲರ ಗುರಿಯೂ ಒಂದೇ ಆಗಿದೆ...'

'ವೇದಾಂತವು ಕಲಿಸುವ ಅತ್ಯಂತ ದೊಡ್ಡ ಪಾಠಗಳಲ್ಲಿ ಇದೂ ಒಂದು. ತಿಳಿದೋ ತಿಳಿಯದೆಯೋ ನಾವೆಲ್ಲರೂ ಒಂದೇ ಗುರಿಯನ್ನು ತಲುಪಲು ಸೆಣಸುತ್ತಿದ್ದೇವೆ. ಹೀಗಿರುವಾಗ ನಾವೇಕೆ ಅಸಹನೆಯನ್ನು ತಾಳಬೇಕು? ಒಬ್ಬ ಮನುಷ್ಯ ಇನ್ನೊಬ್ಬನಿಗಿಂತ ನಿಧಾನವಾಗಿ ಸಾಗುತ್ತಿದ್ದರೆ ನಾವು ಸಹನೆ ಕಳೆದುಕೊಳ್ಳಬೇಕಿಲ್ಲ, ಅವನನ್ನು ಶಪಿಸಬೇಕಿಲ್ಲ ಅಥವಾ ದ್ವೇಷಿಸಬೇಕಿಲ್ಲ. ನಮ್ಮ ಕಣ್ಣುಗಳು ತೆರೆದು ಹೃದಯವು ಪರಿಶುದ್ಧವಾದಾಗ ಅದೇ ದೈವಿಕ ಪ್ರೇರಣೆ ಕೆಲಸ ಮಾಡುತ್ತಿರುವುದು, ಅದೇ ದೈವಿಕತೆ ಪ್ರತಿಯೊಂದು ಮಾನವಹೃದಯದಲ್ಲಿಯೂ ವಿಕಸನ ಹೊಂದುತ್ತಿರುವುದು ಗೋಚರವಾಗುತ್ತದೆ. ಆಗ ಮಾತ್ರ ನಾವು ಮಾನವತೆಯ ಭ್ರಾತೃತ್ವಕ್ಕೆ ಹಕ್ಕುದಾರರೆಂದು ಹೇಳಿಕೊಳ್ಳಬಲ್ಲೆವು.

'ಈ ಅತ್ಯುನ್ನತ ಸ್ಥಿತಿಯನ್ನು ತಲುಪಿದಾಗ ಮನುಷ್ಯನು ಪುರುಷನನ್ನಾಗಲಿ ಸ್ತ್ರೀಯನ್ನಾಗಲಿ, ಮತಪಂಥಗಳನ್ನಾಗಲಿ ವರ್ಣಗೋತ್ರಗಳನ್ನಾಗಲಿ ಅಥವಾ ಇನ್ನಾವುದೇ ಭೇದಗಳನ್ನಾಗಲಿ ಕಾಣಲಾರನು. ಈ ಎಲ್ಲವನ್ನೂ ಅತಿಕ್ರಮಿಸಿ ಹೋಗಿ, ಪ್ರತಿಯೊಬ್ಬ ಮನುಷ್ಯನ ಹಿಂದಿರುವ ದೈವಿಕತೆಯನ್ನು, ನೈಜ ಮಾನವನನ್ನು ಕಂಡುಕೊಳ್ಳುವನು. ಆಗ ಮಾತ್ರವೇ ಅವನು ವಿಶ್ವಭ್ರಾತೃತ್ವದ ನೆಲೆಯನ್ನು ತಲುಪಿದಂತೆ; ಆ ಮನುಷ್ಯನು ಮಾತ್ರವೇ ವೇದಾಂತಿ.' *(೧.೩೯೦-೩೯೨)*

ಈ ಪರಿಪ್ರೇಕ್ಷ್ಯದಿಂದ ನೋಡಿದಾಗ ಯಾವುದು ಸ್ವಾತಂತ್ರ್ಯದ ಮೂಲವೋ ಅದೇ ಎಲ್ಲ ಧರ್ಮ-ಅಧ್ಯಾತ್ಮ-ನೈತಿಕತೆಗಳ ಮೂಲವೂ ಆಗಿದೆ. ಯಾವುದೇ ವಿಷಯದಲ್ಲಾಗಲಿ, ಅಸಹಿಷ್ಣುತೆಯೆನ್ನುವುದು ಪ್ರಕೃತಿವಿರೋಧದ ನೆಲೆಯಾಗಿದ್ದು ಇತರರ

'ಸ್ವತಂತ್ರ' ಸ್ಥಿತಿಗೆ ಭಂಗತರಲೆತ್ನಿಸುವವನು ಮೂಲಭೂತವಾಗಿ ತನ್ನ ಸ್ವಾತಂತ್ರ್ಯವನ್ನೇ ಭಂಗಪಡಿಸಿಕೊಳ್ಳುತ್ತಾನೆ. ಹೀಗಾಗಿ ಹಿಂಸೆ ಮತ್ತು ಸ್ವಾತಂತ್ರ್ಯಗಳು ಒಟ್ಟೊಟ್ಟಿಗೆ ಸಾಗಲಾರವು. 'ನಿನ್ನ ಸ್ವಾತಂತ್ರ್ಯ ಇತರರಿಗೆ ಹಿಂಸೆಯನ್ನುಂಟು ಮಾಡಿದರೆ ಆಗ ನೀನು ಸ್ವತಂತ್ರ ನಲ್ಲ' *(೭.೨೦)* ಎನ್ನುವುದು ವಿವೇಕಾನಂದರ ಸ್ಪಷ್ಟ ಅಭಿಮತ. ಈ ದೃಷ್ಟಿಯಿಂದ ಸ್ವಾತಂತ್ರ್ಯದ ವಿಷಯದಲ್ಲಿ ಕೆಲವರಿಗೆ ಹೆಚ್ಚು ಸ್ವಾತಂತ್ರ್ಯ ಮತ್ತು ಕೆಲವರಿಗೆ ಕಡಿಮೆ ಸ್ವಾತಂತ್ರ್ಯ ಎಂದು ಇರ ಲಾರದು. ಹೀಗಾಗಿ ವಿವೇಕಾನಂದರ ಸ್ವಾತಂತ್ರ್ಯದ ಪರಿಕಲ್ಪನೆ ಯಾವುದೇ ಗಡಿಗಳನ್ನು ನಿರ್ಮಿಸಲಾರದು. ಹಾಗೆ ನೋಡಿದರೆ ಎಲ್ಲ ಗಡಿಗಳನ್ನು ತೊಡೆದು ಹಾಕುವುದೇ ಅದರ ಕಾರ್ಯಸಿದ್ಧಿ ಯಾಗಿದೆ.

ಸ್ವಾಮಿ ವಿವೇಕಾನಂದರ ಸ್ವಾತಂತ್ರ್ಯ ಮೀಮಾಂಸೆಗೆ ಒಂದು ಸಮಗ್ರತೆಯಿದೆ. ಏಕೆಂದರೆ ಅದು ಅಸ್ತಿತ್ವವನ್ನು ಅದರ ಸಮಗ್ರತೆ ಯಲ್ಲಿ ನೋಡುತ್ತದೆ. ವ್ಯಷ್ಟಿ-ಸಮಷ್ಟಿಗಳ ನಡುವಿನ ಹೆಣಿಗೆಯ ಸ್ವರೂಪವನ್ನು ವಿವರಿಸುತ್ತದೆ. ಒಂದೆಡೆ ವ್ಯಕ್ತಿಗತ ವಿಕಾಸದ ಅತ್ಯುನ್ನತ ಸಾಧ್ಯತೆಯನ್ನು ಹೇಳುತ್ತಲೇ ಇನ್ನೊಂದೆಡೆ ಅದಕ್ಕೆ ಪೂರಕವಾಗಿ ಸಾಮಾಜಿಕ ಸಾಮರಸ್ಯದ ಅನುಷ್ಠಾನದ ಎಳೆಗಳನ್ನು ಬಿಡಿಸಿಡುತ್ತದೆ. ಅಂತಿಮವಾಗಿ ಈ ಎಲ್ಲದರಲ್ಲೂ ಮಾನವಪರ ವಾದ ಹಾಗೂ ಸಮಷ್ಟಿ ಹಿತದ ಕಾಳಜಿಗಳನ್ನು ಪ್ರಕಟಿಸುತ್ತದೆ. ಸಹಿಷ್ಣುತೆ-ಸ್ವೀಕಾರ-ಸಮನ್ವಯಗಳ ಆಧಾರದ ಮೇಲೆ ಸ್ವಾತಂ ತ್ರ್ಯದ ಲೋಕಹಿತದ ಮಾದರಿಯೊಂದನ್ನು ನಮ್ಮ ಮುಂದಿಡು ತ್ತದೆ. ಹಾಗೆ ನೋಡಿದರೆ ಶ್ರೀರಾಮಕೃಷ್ಣರ ಸಮನ್ವಯ ಸಿದ್ಧಿ ಎನ್ನುವುದು ಸ್ವಾಮಿ ವಿವೇಕಾನಂದರ ಸ್ವಾತಂತ್ರ್ಯದ ಪರಿಕಲ್ಪನೆ ಯಲ್ಲಿ ತನ್ನ ಸಾರ್ಥಕ್ಯವನ್ನು ಮುಟ್ಟುತ್ತದೆ ಎನ್ನಬೇಕು. 'ಶ್ರೀ ರಾಮಕೃಷ್ಣ ವಚನವೇದ'ವನ್ನು ಶ್ರೀ ಕುವೆಂಪು ಅವರು ಭಾರತದ ಧಾರ್ಮಿಕ ಸಂವಿಧಾನವೆಂದು ಕರೆದುದನ್ನಾದರೂ ಇದೇ ಹಿನ್ನೆಲೆ ಯಲ್ಲಿಯೇ ಗ್ರಹಿಸಬಹುದು. ಕುವೆಂಪು ಅವರ ನುಡಿಗಳಿವು:

'.... ನಮ್ಮ ರಾಷ್ಟ್ರದ ಆಡಳಿತದ ...... ಲಕ್ಷಣವನ್ನು ಸರಿ ಯಾದ ಮಾತಿನಲ್ಲಿ ವರ್ಣಿಸುವುದಾದರೆ 'ಸಮನ್ವಯ ರಾಷ್ಟ್ರ' ಎಂದು ಕರೆಯಬೇಕಾಗುತ್ತದೆ. ಅಂತಹ ಸಮನ್ವಯ ರಾಷ್ಟ್ರಕ್ಕೆ ಅತ್ಯಂತ ಆವಶ್ಯಕವಾಗಿರುವ ಸರ್ವಧರ್ಮ ಸಮನ್ವಯ ದೃಷ್ಟಿ ಯನ್ನು ಈ ಯುಗದಲ್ಲಿ ಸ್ವಾತಂತ್ರ್ಯೋದಯಕ್ಕೆ ಬಹುಪೂರ್ವ ದಲ್ಲಿಯೆ ಸ್ಪಷ್ಟವಾಗಿ, ಅನುಭವಪೂರ್ವಕವಾಗಿ, ..... ಕ್ರಾಂತಿ ಪೂರ್ಣವಾದರೂ ಸಂಪ್ರದಾಯ ಅವಿರುದ್ಧವೆಂಬಂತೆ ಲೋಕ ಸಮಸ್ತಕ್ಕೂ ತೋರಿ ಸಾರಿದವರೆಂದರೆ ಭಗವಾನ್ ಶ್ರೀರಾಮಕೃಷ್ಣ ಪರಮಹಂಸರು.... ನಮ್ಮ ರಾಜಕೀಯ ರಾಜ್ಯಾಂಗಕ್ಕೆ ಪೂರಕ ವಾಗುವ ಧಾರ್ಮಿಕ ರಾಜ್ಯಾಂಗವಾಗುತ್ತದೆ. ಈ 'ಶ್ರೀರಾಮಕೃಷ್ಣ ವಚನವೇದ'.[೧]

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ತಮ್ಮನ್ನು ತೊಡಗಿಸಿ ಕೊಂಡಿದ್ದ ನೇತಾರರಿಗೆ ಅದೊಂದು ಕೇವಲ ಲೌಕಿಕ ಹಾಗೂ ಭೌತಿಕ ಸ್ತರದಲ್ಲಿನ ಕ್ರಿಯೆಯಾಗಿರಲಿಲ್ಲ ಎನ್ನುವುದು ಸ್ಪಷ್ಟವಾದ ಸಂಗತಿಯೇ ಆಗಿದೆ. ಮಹಾತ್ಮ ಗಾಂಧೀಜಿಯವರಂತೂ ಅದ ಕ್ಕೊಂದು ಆಧ್ಯಾತ್ಮಿಕ ಆಯಾಮವನ್ನು ನೀಡಿದವರೇ ಆಗಿದ್ದಾರೆ. ಇನ್ನು ಸುಭಾಸ್ ಚಂದ್ರ ಬೋಸರ ಈ ಮುಂದಿನ ಮಾತುಗಳನ್ನು ನೋಡಿದಾಗ ಭಾರತದ ಸ್ವಾತಂತ್ರ್ಯ-ರಾಷ್ಟ್ರೀಯತೆಗಳ ಬಗೆಗೆ ಅವರ ಕಲ್ಪನೆ ಏನಿತ್ತೆಂಬುದರ ಅರಿವಾಗುತ್ತದೆ ನಮಗೆ. ಅವರು ಹೇಳುತ್ತಾರೆ:

'ರಾಮಕೃಷ್ಣ ಪರಮಹಂಸರು ತಮ್ಮ ಜೀವಮಾನದಲ್ಲಿ ಸಿದ್ಧಿಸಿಕೊಂಡ ಸರ್ವಧರ್ಮ ಸಮನ್ವಯ ಸ್ವಾಮಿಜಿಯವರ ಜೀವನದ ಆಧಾರಶ್ರುತಿಯಾಗಿತ್ತು. ಅಲ್ಲದೆ ಈ ಆದರ್ಶವು ಭವಿಷ್ಯಭಾರತದ ರಾಷ್ಟ್ರೀಯತೆಯ ಬುನಾದಿಯೂ ಆಗಿದೆ. ಈ ಸರ್ವಧರ್ಮ ಸಮನ್ವಯದ ಮತ್ತು ಸಕಲ ಮತ ಸಹಿಷ್ಣುತೆಯ ಪರಿಕಲ್ಪನೆ ಇಲ್ಲದಿದ್ದರೆ, ಅತ್ಯಂತ ವೈವಿಧ್ಯಗಳಿಂದ ಕೂಡಿದ ನಮ್ಮ ಈ ನಾಡಿನಲ್ಲಿ ರಾಷ್ಟ್ರಪ್ರಜ್ಞೆಯ ಭಾವನೆಯನ್ನು ನಾವು ನಿರ್ಮಿಸ ಲಾರೆವು...'

'ಸ್ವಾಮಿ ವಿವೇಕಾನಂದರು ಒಂದೆಡೆ ಎಲ್ಲ ಕಟ್ಟುಪಾಡು ಗಳಿಂದ ಬಿಡಿಸಿಕೊಳ್ಳಬೇಕೆಂದು ಮಾನವನಿಗೆ ಕರೆ ನೀಡಿದರೆ, ಇನ್ನೊಂದೆಡೆ ಧರ್ಮಸಮನ್ವಯದ ಸಂಹಿತೆಯನ್ನು ಸಾರುವು ದರ ಮೂಲಕ ಭಾರತದಲ್ಲಿ ನಿಜವಾದ ರಾಷ್ಟ್ರೀಯತೆಯ ಬುನಾದಿಯನ್ನು ಹಾಕಿದರು.'[೨]

ಈ ಎಲ್ಲ ಮಾತುಗಳು ಸ್ವಾತಂತ್ರ್ಯ-ರಾಷ್ಟ್ರೀಯತೆಗಳನ್ನು ಮರು ವ್ಯಾಖ್ಯಾನಿಸಿಕೊಳ್ಳಲು ನಮ್ಮನ್ನು ಒತ್ತಾಯಿಸುತ್ತವೆ; ಅಂತಿಮ ವಾಗಿ ಎಲ್ಲ ಪರಿಕಲ್ಪನೆಗಳೂ ಮಾನವಪ್ರೀತಿಯಲ್ಲಿ ಪರಿಸಮಾಪ್ತಿ ಗೊಳ್ಳಬೇಕಾದುದರ ಅಗತ್ಯವನ್ನು ಒತ್ತಿಹೇಳುತ್ತವೆ. ಹೀಗಾಗಿ ಸ್ವಾಮಿ ವಿವೇಕಾನಂದರು ಸ್ವಾತಂತ್ರ್ಯದ ಬಗೆಗಿನ ಸಂಕುಚಿತ ಪೂರ್ವಗ್ರಹಿಕೆಗಳಿಂದಲೂ ನಮ್ಮನ್ನು ಬಿಡುಗಡೆ ಮಾಡುತ್ತಾರೆ. ಆದ್ದರಿಂದಲೇ 'ಸ್ವಾತಂತ್ರ್ಯ, ಮುಕ್ತಿ, ಇದಿಷ್ಟೇ ನನ್ನ ಧರ್ಮ' *(೫.೭೭)* ಎಂದು ಘೋಷಿಸಿದ ಅವರು ಸ್ವಾತಂತ್ರ್ಯದ ಹೊಸ ಅರ್ಥದ ಹರಿಕಾರರೂ ಆಗಿದ್ದಾರೆ. ❖

(ಸೂಚನೆ : ಪ್ರಬಂಧದ ಪಠ್ಯದಲ್ಲಿ ಉದ್ದಕ್ಕೂ ಕಂಸದಲ್ಲಿ ಕೊಟ್ಟಿರುವ ಉಲ್ಲೇಖಗಳು *The Complete Works of Swami Vivekananda* (Mayavati Memorial Edition) ಇದರ ಸಂಪುಟ ಮತ್ತು ಪುಟಸಂಖ್ಯೆಗಳನ್ನು ಕ್ರಮವಾಗಿ ಸೂಚಿಸುತ್ತವೆ.)

---

೧ ಶ್ರೀರಾಮಕೃಷ್ಣ ವಚನವೇದ, ಶ್ರೀರಾಮಕೃಷ್ಣ ಆಶ್ರಮ, ಮೈಸೂರು, ೧೯೬೬, ಪೂರ್ವಾರ್ಧ, ಪುಟ Xi

೨ Swami Lokeswarananda (Ed.), *World Thinkers on Ramakrishna- Vivekananda,* The Ramakrishna Mission Institute of Culture, Kolkata, P.48